KAVP500008782022

NAGESH KORGA MOGER

judgment
Digitally signed by NAGESH KORGA MOGER
Location: Sr.Civil Judge and JMFC Sindagi
Date: 2026.06.09 17:26:09 +0530

Presented on : 27-08-2022
Registered on : 27-08-2022
Decided on : 08-06-2026
Duration : 03 years 09 months 12 days.

ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರ ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ , ಸಿಂದಗಿ

ಉಪಸ್ಥಿರು: ಶ್ರೀ ನಾಗೇಶ ಕೆ. ಮೊಗೇರ.,
ಬಿ.ಕಾಂ, ಎಲ್.ಎಲ್.ಎಮ್
ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ

ಕ್ರಿಮಿನಲ್ ಪ್ರಕರಣ ಸಂಖ್ಯೆ ಃ **536/2022**
ದಿನಾಂಕ **8** ನೇ ಜೂನ್ **-2026.**

ಫಿರ್ಯಾದುದಾರರು

ರಾಜ್ಯದ ಪರವಾಗಿ ಸಿಂದಗಿ ಪಿ.ಎಸ್

(ಸಹಾಯಕ ಸರ್ಕಾರಿ ಅಭಿಯೋಜಕರು)

ಃ ವಿರುದ್ಧ ಃ

ಆರೋಪಿ :

1. ಸಂಗನಬಸು @ ಸಂಗನಬಸಪ್ಪ ತಂ.ಶಿವರುದ್ರಪ್ಪ
ಭಾಸಗಿ @ ಬಿರಾದಾರ
ವಯಾಃ 27 ವರ್ಷ, ಉಃ ಒಕ್ಕಲುತನ
ಸಾಃ ಗುಂದಗಿ , ಹಾ.ವ ಸಿಂದಗಿ.

2. ಶಿವರುದ್ರಪ್ಪ ತಂ.ಪೀರಪ್ಪ ಬಾಸಗಿ @ ಬಿರಾದಾರ,
ವಯಾಃ 57 ವರ್ಷ, ಉಃ ಒಕ್ಕಲುತನ
ಸಾಃ ಗುಂದಗಿ , ಹಾ.ವ ಸಿಂದಗಿ.

**(A-1 by Smt.B.G.M Adv.)**
**(A-2 by Sri.B.B.K Adv.)**

ತೀರ್ಪು

ಆರಕ್ಷಕ ಉಪ ನಿರೀಕ್ಷಕರು, ಸಿಂದಗಿ ಪೋಲಿಸ ಠಾಣೆ ಇವರು ಆರೋಪಿತರ ವಿರುದ್ಧ ಭಾ.ದಂ.ಸಂ ಕಲಂ. 420 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆ **:**

ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ವಿಜಯಪುರ-ಕಲಬುರ್ಗಿ ಎನ್.ಎಚ್ 50 ರ ಸಾರ್ವಜನಿಕ ರಸ್ತೆಗೆ ಹೊಂದಿ ಇರುವ ಆಹೇರಿ ಕ್ರಾಸದಲ್ಲಿ ದಿನಾಂಕ 23.05.2020 ರಂದು 19.50 ಗಂಟೆಯ ಸುಮಾರಿಗೆ ಆರೋಪಿತರು ಅರ್ಧ ಕೆಜಿ ಬಂಗಾರ ಕೊಡುತ್ತೇವೆ ರೂ.6 ಲಕ್ಷ ಹಣವನ್ನು ಕೊಡಬೇಕು ಎಂದು ಪಿರ್ಯಾದುದಾರರಿಗೆ ಆಹೇರಿ ಕ್ರಾಸ ಹತ್ತಿರ ಬರಲು ಹೇಳಿ ಪಿರ್ಯಾದುದಾರರ ಕಡೆಯಿಂದ ರೂ.6 ಲಕ್ಷವನ್ನು ತೆಗೆದುಕೊಂಡು, ಅರ್ಧ ಕೆ.ಜಿ. ಬಂಗಾರ ಕೊಡದೇ ಮೋಸ ಮಾಡಿದ್ದು ಈ ಬಗ್ಗೆ ಚಾ.ಸಾ.1 ರವರು ನೀಡಿದ ದೂರಿನನ್ವಯ ಸಿಂದಗಿ

ಪೋಲಿಸರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ 420 ಸಹವಾಚಕ ಕಲಂ 34 ರನ್ವಯ ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆಯನ್ನು ನಡೆಸಿ, ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಪ್ರಕರಣವನ್ನು ದಾಖಲಿಸಿದ ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ಅಪರಾಧದ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸನ್ನು ನೀಡಲಾಯಿತು. ಆರೋಪಿತರು ಹಾಜರಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರನ್ವಯ ದೋಷಾರೋಪಣೆ ಪಟ್ಟಿಯ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಲಾಯಿತು. ಆರೋಪಿತರ ವಿರುದ್ದ ದೋಷಾರೊಪಣೆಯನ್ನು ರಚಿಸಿ ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಲಾಗಿ ಸದರಿ ದೋಷಾರೋಪಣೆಯನ್ನು ಆರೋಪಿತರು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

4. ಅಭಿಯೋಗದವರು ಆರೋಪಿಯ ಮೇಲಿನ ಆಪಾದನೆಗಳು ಸಾಭೀತುಪಡಿಸಲು ಒಟ್ಟು ಸಾಕ್ಷೀದಾರಗಳ ಪೈಕಿ 7 ಸಾಕ್ಷೀದಾರರನ್ನು ಅ.ಸಾ.1 ರಿಂದ 7 ಎಂದು ಮತ್ತು 10 ದಾಖಲೆಗಳನ್ನು ನಿ.ಪಿ.1 ರಿಂದ 10 ಎಂದು

ಗುರುತಿಸಿಕೊಂಡಿರುತ್ತಾರೆ. ಆರೋಪಿಯ ವಿರುದ್ದ ಕಂಡು ಬಂದ ಸಾಕ್ಷಿದಾರರ ಹೇಳಿಕೆಗಳನ್ನು ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಪಡೆದುಕೊಳ್ಳಲಾಯಿತು. ಆರೋಪಿಯು ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿಸಿರುವುದಿಲ್ಲ.

5. ಉಭಯ ಪಕ್ಷಗಳ ವಾದಗಳನ್ನು ಆಲಿಸಲಾಯಿತು.

6. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಬವಿಸುತ್ತವೆ ಃ

1. ಸಿಂದಗಿ ಪೋಲಿಸ ಠಾಣೆ ವ್ಯಾಪ್ತಿಯಲ್ಲಿ ಬರುವ ವಿಜಯಪುರ-ಕಲಬುರ್ಗಿ ಎನ್.ಎಚ್ 50 ರ ಸಾರ್ವಜನಿಕ ರಸ್ತೆಗೆ ಹೊಂದಿ ಇರುವ ಆಹೇರಿ ಕ್ರಾಸದಲ್ಲಿ ದಿನಾಂಕ 23.05.2020 ರಂದು 19.50 ಗಂಟೆಯ ಸುಮಾರಿಗೆ ಆರೋಪಿತರು ಅರ್ಧ ಕೆಜಿ ಬಂಗಾರ ಕೊಡುತ್ತೇವೆ ರೂ.6 ಲಕ್ಷ ಹಣವನ್ನು ಕೊಡಬೇಕು ಎಂದು ಪಿರ್ಯಾದುದಾರರಿಗೆ ಆಹೇರಿ ಕ್ರಾಸ ಹತ್ತಿರ ಬರಲು ಹೇಳಿ ಪಿರ್ಯಾದುದಾರರ ಕಡೆಯಿಂದ ರೂ.6 ಲಕ್ಷವನ್ನು ತೆಗೆದುಕೊಂಡು, ಅರ್ಧ ಕೆ.ಜಿ. ಬಂಗಾರ ಕೊಡದೇ ಮೋಸ ಮಾಡಿದ್ದು ಈ ಮೂಲಕ ಭಾ.ದಂ.ಸಂಹಿತೆ ಕಲಂ. 420 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತಾರೆಯೇ ?

2. ಯಾವ ಆದೇಶ?

7. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆ.

ಅಂಶ: 1 : ನಕರಾತ್ಮಕವಾಗಿ

ಅಂಶ.2 : ಈ ಕೆಳಕಾಣಿಸಿದ ಕಾರಣಗಳಿಗಾಗಿ---

<u>ಕಾ ರ ಣ ಗ ಳು</u>

8. <u>ಅಂಶ **1**</u> ಃ ಆರೋಪಿಯು ಭಾ.ದಂ.ಸಂ.ಕಲಂ 420 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾರೆಂದು ಆಪಾದಿಸಲಾಗಿದೆ**.** ತನಿಖಾಧಿಕಾರಿಗಳು ತನಿಖೆಯನ್ನು ನಡೆಸಿ**,** ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ**.** ಅಭಿಯೋಜನೆಯವರು ಆರೋಪಿಯ ವಿರುದ್ಧದ ಆಪಾದನೆಯನ್ನು ರುಜುವಾತು ಪಡಿಸಲು ನ್ಯಾಯಾಲಯದ ಮುಂದೆ ಅ.ಸಾ.1 ರಿಂದ 7 ರವರನ್ನು ವಿಚಾರಣೆಗೆ ಒಳಪಡಿಸಿ, ನಿ.ಪಿ 1 ರಿಂದ 10 ನ್ನು ಗುರುತಿಸಿಕೊಂಡಿರುತ್ತಾರೆ.

9. ಅ.ಸಾ.1 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ಜಪ್ತು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು, ಫೋಟೋವನ್ನು ನಿ.ಪಿ.2 ಎಂದು ಗುರುತಿಸಲಾಗಿರುತ್ತದೆ. ಸದರಿ ಸಹಿಯನ್ನು ಸಿಂದಗಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ವಾಹನ ಬಿಡುಗಡೆ ಸಲುವಾಗಿ ಸದರಿ ಸಹಿಯನ್ನು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಅಭಿಯೋಜನೆಯವರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

" ದಿ. 26-07-2021 ರಂದು ನನ್ನ ಹಾಗೂ ಚಾ.ಸಾ.6 ರವರ ಸಮಕ್ಷಮ ಪೊಲೀಸರು ಬಜಾಜ ಪಲಸರ್ ಮೋಟರ್ ಸೈಕಲನ್ನು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಿ.ಪಿ.2 ರಂತೆ ಫೋಟೊವನ್ನು ಪೊಲೀಸರು ತೆಗೆದಿದ್ದರು ಎಂದರೆ ಸರಿ. ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ." ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಆರೋಪಿತರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

" ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಿ.ಪಿ.1 ರಲ್ಲಿ ಏನೆಲ್ಲಾ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿ.ಪಿ.1 ರಲ್ಲಿ ಬರೆದ ವಿಷಯವನ್ನು ಪೊಲೀಸರು ಓದಿ ಹೇಳಿಲ್ಲ ಎಂದರೆ ಸರಿ. " ಎಂದು ಸಾಕ್ಷ್ಯ ನುಡಿದಿರುತ್ತಾರೆ.

10. ಅ.ಸಾ.2 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ಚಾ.ಸಾ. 1 ತನ್ನ ಮಾವ. ಚಾಸಾ 8 ರಿಂದ 12 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. 2020 ರಲ್ಲಿ ಒಂದು ದಿನ ತಾನು ಹೊಲದಲ್ಲಿದ್ದಾಗ ಮದ್ಯಾಹ್ನ 3-30 ಗಂಟೆಯ ಸುಮಾರಿಗೆ ಚಾಸಾ 1 ರವರು ತನಗೆ ಫೋನ್ ಮಾಡಿ ಹೂವಿನ ಹಳ್ಳಿ ಬಸ್ ನಿಲ್ದಾಣಕ್ಕೆ ಬರುವಂತೆ ಹೇಳಿರುತ್ತಾರೆ. ತಾನು ಬೈಕ್ ಮೇಲೆ ಹೂವಿನ ಹಳ್ಳಿ ಬಸ್ ನಿಲ್ದಾಣಕ್ಕೆ ಬಂದಿರುತ್ತೇನೆ. ನಂತರ ತಾನು ಮತ್ತು ಚಾ.ಸಾ. 1 ರವರು ಸೇರಿ ಬೈಕ್ ಮೇಲೆ

ಆಲಮೇಲ್ ಗೆ ಹೋಗಿ ಚಾಸಾ 1 ರವರ ಪರಿಚಯಸ್ಥರ ಕಡೆಯಿಂದ ರೂ. 6,00,000/- ಹಣವನ್ನು ಪಡೆದುಕೊಂಡು ಆಹೇರಿ ಕ್ರಾಸ್ ಗೆ ಬಂದಿರುತ್ತೇವೆ. ನಂತರ ತನ್ನ ಮಾವನಿಗೆ ಇಲ್ಲಿಗೆ ಎಕೆ ಕರೆದುಕೊಂಡು ಬಂದ್ದಿದಿರಿ ಎಂದು ಕೇಳಿದಾಗ, ಆರೋಪಿ ನಂ.1 ರವರು ಇಲ್ಲಿಗೆ ಬರುತ್ತಾರೆ. ರೂ. 6 ಲಕ್ಷ ಹಣವನ್ನು ಕೇಳಿದ್ದಾರೆ ಬಂಗಾರವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ ಎಂದು ತನ್ನ ಮುಂದೆ ಹೇಳಿದರು. ನಂತರ ಆರೋಪಿತರು ತಮಗೆ ಫೋನ್ ಮಾಡಿದ್ದು ತಾವು ಆಹೇರಿ ಕ್ರಾಸ್ ಗೆ ಬಂದಿರುವುದಾಗಿ ಹೇಳಿರುತ್ತೇವೆ. ನಂತರ ಆರೋಪಿತರು ಬಂಗಾರ ತಮ್ಮ ಬಳಿ ಇದೆ, ನೀವು ಇಬ್ಬರು ಬೈಕ್ ಮೇಲೆ ಬರುವವರ ಕೈಯಲ್ಲಿ ಹಣವನ್ನು ಕೊಡಿ ಎಂದು ಹೇಳಿರುತ್ತಾರೆ. ಅಷ್ಟರಲ್ಲಿ ಇಬ್ಬರು ವ್ಯಕ್ತಿಗಳು ಬೈಕ್ ಮೇಲೆ ಬಂದಿರುತ್ತಾರೆ. ನಂತರ ತಾವು ಆರೋಪಿತರಿಗೆ ಫೋನ್ ಮಾಡಿ ತಮ್ಮ ಬಳಿಗೆ ಬಂದಿರುವ ವ್ಯಕ್ತಿಗಳು ಆರೋಪಿತರು ಕಳುಹಿಸಿರುವ ವ್ಯಕ್ತಿಗಳು ಎಂದು ಖಚಿತ ಪಡಿಸಿಕೊಂಡಿರುತ್ತೇವೆ. ಆರೋಪಿತರು ಹೇಳಿದ ಮೇರೆಗೆ ರೂ.6 ಲಕ್ಷವನ್ನು ಬೈಕ್ ಮೇಲೆ ಬಂದಿರುವ ವ್ಯಕ್ತಿಗಳಿಗೆ ಕೊಟ್ಟಿರುತ್ತೇವೆ. ನಂತರ ಆರೋಪಿ ಸಂಗನ ಬಸುರವರು ತಮ್ಮ ಬಳಿಗೆ ಬಂದಿರುತ್ತಾರೆ. ಆದರೆ ನಮಗೆ ಬಂಗಾರವನ್ನು ಕೊಟ್ಟಿರುವುದಿಲ್ಲ. ನಂತರ ಚಾ.ಸಾ 1 ಮತ್ತು ಆರೋಪಿತರು ಕಾರನಲ್ಲಿ ಸಿಂದಗಿಗೆ ಬಂದಿರುತ್ತಾರೆ. ತಾನು ತನ್ನ ಬೈಕ್ ಮೇಲೆ ಸಿಂದಗಿಗೆ ಬಂದಿರುತ್ತೇನೆ. ಆಗ ಸಮಯ ಸಂಜೆ 7-30 ರಿಂದ 8-00 ಗಂಟೆ ಆಗಿತ್ತು. ಈ ಬಗ್ಗೆ ಚಾ.ಸಾ 1 ರವರು ದೂರನ್ನು ನೀಡಿರುತ್ತಾರೆ. ತಾನು ಪೊಲೀಸರ

ಮುಂದೆ ಈ ಬಗ್ಗೆ ಹೇಳಿರುತ್ತೇನೆ. ಪೊಲೀಸರು ನಂತರ ತನ್ನನ್ನು ಠಾಣೆಗೆ ಕರೆಯಿಸಿದ್ದರು. ಬೈಕ್ ಮೇಲೆ ಬಂದು ಹಣ ತೆಗೆದುಕೊಂಡು ಹೊದ ವ್ಯಕ್ತಿಗಳನ್ನು ತೋರಿಸಿ ಅವರ ಹೆಸರು ಓಂಕಾರ ಮತ್ತು ಮೌನೇಶ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ತಾನು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ ನುಡಿದಿರುತ್ತಾರೆ. ಆರೋಪಿತರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

> " ಚಾಸಾ 1 ರವರಿಗೆ ಆರೋಪಿತರು ಯಾವ ಫೋನ್ ನಂಬರನಿಂದ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ 1 ರವರು ಹೇಳಿದ್ದರಿಂದ ಆರೋಪಿ ನಂ.1 ರವರು ಚಾಸಾ 1 ರವರಿಗೆ ಫೋನ್ ಮಾಡಿದ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿತರು ನನಗೆ ಫೋನ್ ಮಾಡಿಲ್ಲ ಮತ್ತು ನನ್ನ ಫೋನ್ ನಿಂದ ಆರೋಪಿತರಿಗೆ ನಾವು ಫೋನ್ ಮಾಡಿಲ್ಲ"
> "ಚಾ.ಸಾ 1 ರವರು ಯಾರಿಗೆ ಫೋನ್ ಮಾಡಿದ್ದಾರೆ ಎಂದು ನಾನು ಕೇಳಿದ್ದು ಆರೋಪಿ ನಂ.1 ರವರಿಗೆ ಫೋನ್ ಮಾಡುವುದಾಗಿ ಹೇಳಿರುತ್ತಾರೆ. ಹಣವನ್ನು ಕೊಡುವಾಗ ರಾತ್ರಿಯಾಗಿತ್ತು ಎಂದರೆ ಸರಿ. ಅವರಿಗೆ ನಾವು ಹಣವನ್ನು ಎಣಿಸಿ ಕೊಡಲಿಲ್ಲ ಎಂದರೆ ಸರಿ. ಕತ್ತಲಾಗಿದ್ದರಿಂದ ಹಣವು ಕಾಣುತ್ತಿರಲಿಲ್ಲ ಮತ್ತು ಸದರಿ ವ್ಯಕ್ತಿಗಳ ಮುಖವು ಕಾಣುತ್ತಿರಲಿಲ್ಲ ಎಂದರೆ ಸರಿ. ಚಾಸಾ 1 ರವರು ನನ್ನ ಮಾವ ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. " ಎಂದು ಸಾಕ್ಷ್ಯ ನುಡಿದಿರುತ್ತಾರೆ.

11. ಅ.ಸಾ.3 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ತನಗೆ ಚಾ.ಸಾ. 1 ಮತ್ತು 7 ರವರ ಪರಿಚಯ ಇದೆ. ಚಾಸಾ 9 ರಿಂದ 12 ರವರ ಪರಿಚಯ ಇಲ್ಲ.

ಆರೋಪಿತರ ಪರಿಚಯ ಇಲ್ಲ. ಚಾ.ಸಾ 1 ರವರು ತನ್ನ ಕಾಕಾ ರವರ ಮಗ. ಚಾಸಾ 1 ರವರು ತನಗೆ ಹಣಕಾಸಿನ ಅಡಚಣೆ ಇದೆ ಎಂದು ಹೇಳಿ ರೂ. 3 ಲಕ್ಷವನ್ನು ಕೊಡುವಂತೆ ಕೇಳಿದ್ದು , ತಾನು ಕರ್ನಾಟಕ ಬ್ಯಾಂಕಿನ ರೂ. 3 ಲಕ್ಷ ಚೆಕ್ ನ್ನು ಬರೆದುಕೊಟ್ಟಿದ್ದೆ. ನಾನು ಸದರಿ ಹಣವನ್ನು ಕೊಡುವಂತೆ ಕೇಳಿದ್ದು ಚಾ.ಸಾ 1 ರವರು ಇವತ್ತಿನವರೆಗೂ ಕೊಟ್ಟಿರುವುದಿಲ್ಲ. ಸದರಿ ರೂ. 3 ಲಕ್ಷ ಹಣವನ್ನು ನನ್ನ ಬ್ಯಾಂಕಿನ ಸಾಲವನ್ನು ಮರುಪಾವತಿಸುವ ಸಲುವಾಗಿ ಬೇಕು ಎಂದು ಅವರು ಹೇಳಿದ್ದರು. ಮುಂದೆ ಎನಾಯಿತು ಎಂದು ತನಗೆ ಗೊತ್ತಿಲ್ಲ. ಸದರಿ ಹಣವನ್ನು ಚಾ.ಸಾ 1 ರವರು ಯಾರಿಗೆ ಕೊಟ್ಟಿದ್ದಾರೆ ಎಂದು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ಆರೋಪಿತರು ಮತ್ತು ಚಾಸಾ 1 ರವರ ನಡುವೆ ಎನು ವ್ಯವಹಾರ ಮತ್ತು ಘಟನೆ ನಡೆದಿತ್ತು ಎಂದು ತನಗೆ ಗೊತ್ತಿಲ್ಲ. ಪೊಲೀಸರ ಮುಂದೆ ತಾನು ಎನನ್ನು ಹೇಳಿಲ್ಲ. ಪೊಲೀಸರು ಆರೋಪಿತರನ್ನು ತನಗೆ ತೋರಿಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

12. ಅಭಿಯೋಜನೆಯವರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

" ದಿ.22-05-2020 ರಂದು ಚಾಸಾ 1 ರವರು ಬಂದು ರೂ. 3 ಲಕ್ಷ ಹಣವನ್ನು ಕೇಳಿದ್ದರು ಎಂದರೆ ಸರಿ. ಸುಮಾರು 03 ದಿನಗಳ ನಂತರ ಅರ್ಧ ಕೆ ಜಿ ಬಂಗಾರ ಸಿಕ್ಕಿದೆ, ಅದಕ್ಕೆ ರೂ. 6 ಲಕ್ಷವನ್ನು ಕೊಡಬೇಕಾಗುತ್ತದೆ, ಈ ವಿಷಯವನ್ನು ಯಾರ ಮುಂದೆಯು ಹೇಳ

ಬೇಡ ಎಂದು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಆಗ ನಾನು ಹೊಲ ಮಾರಾಟ ಮಾಡಿದ ಹಣ ನನ್ನ ಮನೆಯಲ್ಲಿ ಇದೆ ಎಂದು ಹೇಳಿ ನಾನು ರೂ. 3 ಲಕ್ಷವನ್ನು ಚಾಸಾ 1 ರವರಿಗೆ ಕೊಟ್ಟಿದ್ದೆ ಎಂದರೆ ಸರಿ. ಅದೇ ರೀತಿ ಚಾಸಾ 1 ರವರು ಚಾಸಾ 9 ರವರ ಕಡೆಯಿಂದ ರೂ. 4 ಲಕ್ಷವನ್ನು ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ." ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಆರೋಪಿತರ ಪರ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಃ

" ಚಾಸಾ 1 ರವರು ನನ್ನಿಂದ ಹಣವನ್ನು ತೆಗೆದುಕೊಂಡು ಹೋಗಿ ಈಗ 6 ವರ್ಷಗಳಾಗಿವೆ. ಸದರಿ ಹಣವನ್ನು ಬ್ಯಾಂಕಿಗೆ ತುಂಬುವುದಾಗಿ ಹೇಳಿ ನನ್ನಿಂದ ತೆಗೆದುಕೊಂಡು ಹೋಗಿದ್ದರು." ಎಂದು ಸಾಕ್ಷ್ಯ ನುಡಿದಿರುತ್ತಾರೆ.

13. ಅ.ಸಾ.4 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ಚಾ.ಸಾ.1, 11 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಚಾ.ಸಾ.12 ರವರ ಪರಿಚಯ ಇಲ್ಲ. ಚಾ.ಸಾ.14 ತನ್ನ ಮಾವ. ಚಾ.ಸಾ.14 ರವರಿಗೆ ಸೇರಿದ ಒಂದು ಮೋಟಾರ ಸೈಕಲ ಇದ್ದು , ಅದರ ನಂ.ಕೆ.ಎ.28/ಇ.ಎಕ್ಸ 9527 ಆಗಿರುತ್ತದೆ. ಸುಮಾರು 3-4 ವರ್ಷಗಳ ಹಿಂದೆ ತಾನು ಸದರಿ ಮೋಟಾರ ಸೈಕಲನ್ನು ತೆಗೆದುಕೊಂಡು ಬಸವೇಶ್ವರ ಸರ್ಕಲ ಹತ್ತಿರ ಹೋದಾಗ ಚಾ.ಸಾ.11 ರವರು ಸದರಿ ಮೋಟಾರ ಸೈಕಲನ್ನು ತನ್ನ ಕಡೆಯಿಂದ ಪಡೆದು ತೆಗೆದುಕೊಂಡು ಹೋಗಿದ್ದರು. 2-3 ಗಂಟೆಗಳ

ನಂತರ ಸದರಿ ಮೋಟರ ಸೈಕಲನ್ನು ಮರಳಿ ತನಗೆ ಕೊಟ್ಟಿರುತ್ತಾರೆ. ನಂತರ ಪೋಲಿಸರು ತನ್ನನ್ನು ಠಾಣೆಗೆ ಕರೆದು, ಸದರಿ ಮೋಟಾರ ಸೈಕಲನ್ನು ಚಾ.ಸಾ.11 ರವರು ತೆಗೆದುಕೊಂಡು ಹೋಗಿ ಸುಮಾರು 4-5 ಲಕ್ಷವನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ತನಗೆ ಹೇಳಿರುತ್ತಾರೆ. ಸದರಿ ಹಣವು ಯಾರಿಗೆ ಸೇರಿದಾಗಿತ್ತು ಎಂದು ತನಗೆ ಗೊತ್ತಿಲ್ಲ. ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡು ಬಂದಿದ್ದರು ಎಂದು ತನಗೆ ಗೊತ್ತಿಲ್ಲ. ಈ ಘಟನೆಯಿಂದ ಯಾರಿಗೆ ಎನು ಆಗಿದೆ ಎಂದು ತನಗೆ ಗೊತ್ತಿಲ್ಲ. ಪೋಲಿಸರ ಮುಂದೆ ತಾನು ಈ ಬಗ್ಗೆ ಹೇಳಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯವರ ಪರ ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಕೂಡ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ.

14. ಅ.ಸಾ.5 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ಚಾ.ಸಾ.1, 11, 12 ಮತ್ತು ಪರಿಚಯ ಇಲ್ಲ. ಚಾ.ಸಾ.13 ತನ್ನ ಅಳಿಯ. ತನಗೆ ಸೇರಿದ ಮೋಟರ ಸೈಕಲ ಇದ್ದು , ಅದರ ನಂ.ಕೆ.ಎ.28/ಇ.ಎಕ್ಸ 9527 ಆಗಿರುತ್ತದೆ. ಸುಮಾರು 3-4 ವರ್ಷಗಳ ಹಿಂದೆ ಚಾ.ಸಾ.13 ರವರು ಸದರಿ ಮೋಟಾರ ಸೈಕಲನ್ನು ತೆಗೆದುಕೊಂಡು , ಬಸವೇಶ್ವರ ಸರ್ಕಲ ಹತ್ತಿರ ಹೋದಾಗ ಚಾ.ಸಾ.11 ರವರು ಸದರಿ ಮೋಟಾರ ಸೈಕಲನ್ನು ಚಾ.ಸಾ.13 ರವರ ಕಡೆಯಿಂದ ಪಡೆದು ತೆಗೆದುಕೊಂಡು

ಹೋಗಿದ್ದರು. 2-3 ಗಂಟೆಗಳ ನಂತರ ಸದರಿ ಸೈಕಲನ್ನು ಮರಳಿ ಚಾ.ಸಾ.13 ರವರಿಗೆ ಕೊಟ್ಟಿದ್ದರು. ನಂತರ ಪೋಲಿಸರು ತನ್ನನ್ನು ಠಾಣೆಗೆ ಕರೆದು, ಸದರಿ ಮೋಟಾರ ಸೈಕಲನ್ನು ಚಾ.ಸಾ.11 ರವರು ತೆಗೆದುಕೊಂಡು ಹೋಗಿ ಸುಮಾರು 4-5 ಲಕ್ಷವನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ತನಗೆ ಹೇಳಿರುತ್ತಾರೆ. ಸದರಿ ಹಣವು ಯಾರಿಗೆ ಸೇರಿದಾಗಿತ್ತು ಎಂದು ತನಗೆ ಗೊತ್ತಿಲ್ಲ. ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡು ಬಂದಿದ್ದರು ಎಂದು ತನಗೆ ಗೊತ್ತಿಲ್ಲ. ಈ ಘಟನೆಯಿಂದ ಯಾರಿಗೆ ಎನು ಆಗಿದೆ ಎಂದು ತನಗೆ ಗೊತ್ತಿಲ್ಲ. ಪೋಲಿಸರು ಸದರಿ ಮೋಟರ ಸೈಕಲನ್ನು ನ್ಯಾಯಾಲಯದ ಆದೇಶದ ಪ್ರಕಾರ ತನಗೆ ಠಾಣೆಯಲ್ಲಿ ಕೊಟ್ಟಿರುತ್ತಾರೆ. ಪೋಲಿಸರ ಮುಂದೆ ತಾನು ಈ ಬಗ್ಗೆ ಹೇಳಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯವರ ಪರ ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಕೂಡ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ.

15. ಅ.ಸಾ.6 ರವರು ತಮ್ಮ ವಿಚಾರಣೆಯಲ್ಲಿ ನ್ಯಾಯಾಲಯದ ಆದೇಶದ ಪ್ರಕಾರ ವಾಹನ ನಂ.ಕೆ.ಎ.28/ಇಎಕ್ಸ್-9257 ನ್ನು ಮಾಲೀಕರಿಗೆ ಬಿಡುಗಡೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

16. ಅ.ಸಾ.7 ರವರು ತಮ್ಮ ವಿಚಾರಣೆಯ ವೇಳೆಯಲ್ಲಿ ಚಾ.ಸಾ.19 ರ ಆದೇಶದ ಮೇರೆಗೆ ಈ ಪ್ರಕರಣದ ಆರೋಪಿತರನ್ನು ಪತ್ತೆ ಹೆಚ್ಚಲು ಹೋಗಿದ್ದು, ಆರೋಪಿತರು ಸಿಗದೇ ಇರುವ ಬಗ್ಗೆ ವರದಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

17. ಆರೋಪಿತರು ಪಿರ್ಯಾದುದಾರರಿಗೆ ಬಂಗಾರವನ್ನು ಕೊಡುವುದಾಗಿ ಹೇಳಿ ಪಿರ್ಯಾದುದಾರರ ಕಡೆಯಿಂದ ರೂ.6 ಲಕ್ಷವನ್ನು ತೆಗೆದುಕೊಂಡು ಬಂಗಾರವನ್ನು ಕೊಡೆದೇ ಮೋಸ ಮಾಡಿದ್ದಾರೆ ಎಂದು ಆಪಾದಿಸಲಾಗಿದೆ. ಈ ಬಗ್ಗೆ ಪ್ರಕರಣದ ಬಹುಮುಖ್ಯ ಸಾಕ್ಷೀದಾರರಾದ ಪಿರ್ಯಾದುದಾರರು ನ್ಯಾಯಾಲಯದ ಮುಂದೆ ಹಾಜರಾಗಿ ತಾವು ನೀಡಿರುವ ದೂರಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಅ.ಸಾ.2 ರವರು ತನ್ನ ವಿಚಾರಣೆಯ ವೇಳೆಯಲ್ಲಿ ಪಿರ್ಯಾದುದಾರರೊಂದಿಗೆ ತಾನು ಹೋಗಿದ್ದು, ಆರೋಪಿತರಿಗೆ ದುಡ್ಡು ಕೊಟ್ಟ ನಂತರ ಅವರು ಬಂಗಾರವನ್ನು ಕೊಡದೇ ಮೋಸ ಮಾಡಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇವರು ಪಿರ್ಯಾದುದಾರರ ಕೋರಿಕೆಯ ಮೇರೆಗೆ ಪಿರ್ಯಾದುದಾರರ ಜೊತೆ ಹೋದವರಾಗಿದ್ದು, ಪಿರ್ಯಾದುದಾರರು ಆರೋಪಿತರು ಹೇಳಿರುವ ವ್ಯಕ್ತಿಗೆ ಹಣವನ್ನು ಕೊಟ್ಟಿರುವುದನ್ನು ನೋಡಿದವರಾಗಿರುತ್ತಾರೆ. ಆದರೆ ಪಿರ್ಯಾದುದಾರರು ನ್ಯಾಯಾಲಯದ ಮುಂದೆ ವಿಚಾರಣೆಗೆ ಒಳಗಾಗಿರುವುದಿಲ್ಲ. ಅ.ಸಾ.3 ರವರು

ಪಿರ್ಯಾದುದಾರರಿಗೆ ದುಡ್ಡನ್ನು ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಅ.ಸಾ.4 ಮತ್ತು 5 ರವರು ಚಾ.ಸಾ.11 ರವರಿಗೆ ಮೋಟರ ಸೈಕಲನ್ನು ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಅ.ಸಾ.1 ರವರು ವಾಹನ ಬಿಡುಗಡೆಯ ಪಂಚನಾಮೆಯ ಸಾಕ್ಷೀಯದಾರರಾಗಿರುತ್ತಾರೆ. ಅ.ಸಾ.6 ಮತ್ತು 7 ಪೋಲಿಸ ಇಲಾಖೆಯ ಸಿಬ್ಬಂದಿಗಳಾಗಿದ್ದು ಅ.ಸಾ.6 ರವರು ನ್ಯಾಯಾಲಯದ ಆದೇಶದ ಮೇರೆಗೆ ವಾಹನವನ್ನು ಬಿಡುಗಡೆ ಮಾಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಅ.ಸಾ.7 ರವರು ಈ ಪ್ರಕರಣದಲ್ಲಿ ಆರೋಪಿತರನ್ನು ಪತ್ತೆ ಹಚ್ಚಲು ಹೋದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

18. ಆರೋಪಿತರು ಪಿರ್ಯಾದುದಾರರಿಗೆ ಬಂಗಾರ ಕೊಡುವುದಾಗಿ ಹೇಳಿ ದುಡ್ಡು ತೆಗೆದುಕೊಂಡು ಮೋಸ ಮಾಡಿದ್ದಾರೆ ಎಂದು ನಂಬಲು ಪ್ರಕರಣದ ಬಹುಮುಖ್ಯ ಸಾಕ್ಷೀದಾರರಾದ ಪಿರ್ಯಾದುದಾರರು ಹಾಜರಾಗಿ ಸಾಕ್ಷೀ ನುಡಿಯದೇ ಇರುವುದರಿಂದ ಪ್ರಕರಣಕ್ಕೆ ಹಿನ್ನಡೆಯನ್ನುಂಟಾಗಿರುತ್ತದೆ. ಆರೋಪಿತರು ಮತ್ತು ಪಿರ್ಯಾದುದಾರರ ನಡುವೆ ಬಂಗಾರ ಖರೀದಿಗೆ ಸಂಬಂಧಿಸಿ ಈ ಹಣಕಾಸಿನ ವ್ಯವಹಾರ ಆಗಿತ್ತು ಎನ್ನುವ ಸಮಯದಲ್ಲಿ ಹಾಜರಿದ್ದ ಯಾವುದೇ ವ್ಯಕ್ತಿಗಳು ವಿಚಾರಣೆಗೆ ಒಳಗಾಗಿರುವುದಿಲ್ಲ. ಅ.ಸಾ.2 ರವರು ಪಿರ್ಯಾದುದಾರರು ಹಣವನ್ನು ಆರೋಪಿತರು ಹೇಳಿರುವ ವ್ಯಕ್ತಿಗೆ ಕೊಟ್ಟಿರುವುದನ್ನು ನೋಡಿದವರಾಗಿರುತ್ತಾರೆ.

ಬಂಗಾರದ ಸಲುವಾಗಿ ಸದರಿ ಹಣವನ್ನು ಆರೋಪಿತರು ಹೇಳಿದ ವ್ಯಕ್ತಿಗೆ ಕೊಡುತ್ತಿದ್ದೇನೆ ಎಂದು ಪಿರ್ಯಾದುದಾರರು ಹೇಳಿರುವುದನ್ನು ಆಧರಿಸಿ , ಅ.ಸಾ.2 ರವರು ಬಂಗಾರದ ಸಲುವಾಗಿ ಪಿರ್ಯಾದುದಾರರು ಹಣವನ್ನು ಕೊಟ್ಟಿದ್ದಾರೆಂದು ಹೇಳಿರುತ್ತಾರೆ. ಆರೋಪಿತರ ಮೇಲೆ ಆಪಾದಿಸಲಾದಂತೆ ಅಪರಾಧವನ್ನು ಮಾಡಿದ್ದಾರೆ ಎಂದು ನಂಬಲು ಕಡತದಲ್ಲಿ ಸಾಕ್ಷ್ಯ ಲಭ್ಯವಿರುವುದಿಲ್ಲ. ಅಂತೆಯೇ ಅಭಿಯೋಜನೆಯವರು ಆರೋಪಿಯ ಮೇಲಿನ ಆಪಾದನೆಯನ್ನು ಸಾಭೀತುಪಡಿಸಲು ವಿಫಲರಾಗಿರುತ್ತಾರೆ ಎಂದು ತೀರ್ಮಾನಿಸಿ ಅಂಶ **1** ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

19. <u>ಅಂಶ**.2:**</u>**-** ಅಂಶ 1 ಕ್ಕೆ ನೀಡಿರುವ ಕಾರಣಗಳು ಮತ್ತು ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸುತ್ತೇನೆ.

<u>ಆ ದೇ ಶ</u>

ದಂ.ಪ್ರ.ಸಂ. ಕಲಂ 248(1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾ.ದಂ.ಸಂ.ಕಲಂ 420 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹವಾದ ಅಪರಾಧದ ಆಪಾದನೆಯಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರನ್ನು ಈ ಪ್ರಕರಣದಿಂದ ಸ್ವತಂತ್ರಗೊಳಿಸಿದ್ದು, ಆರೋಪಿತರು ನ್ಯಾಯಾಲಯಕ್ಕೆ

ಬರೆದುಕೊಟ್ಟಿರುವ ವೈಯಕ್ತಿಕ ಮುಚ್ಚಳಿಕೆ ಮತ್ತು ಜಾಮೀನು ಮುಚ್ಚಳಿಕೆಯನ್ನು ಮೇಲ್ಮನವಿಯ ಅವಧಿಯವರೆಗೆ ಮುಂದುವರೆಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚು ಮಾಡಿದ ನಂತರ ಪರಿಶೀಲಿಸಿ, ಸಹಿ ಮಾಡಿ ದಿನಾಂಕ 8 ನೇ ಜೂನ್-2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು)

(ನಾಗೇಶ ಕೆ ಮೊಗೇರ )
ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ.

## ಅನುಬಂಧ

**ಅಭಿಯೋಜನೆಯ ಪರ ಸಾಕ್ಷ್ಯ ಮಾಡಿಸಿದವರ ಪಟ್ಟಿ**

ಅ.ಸಾ.1 ಃ ನಾಗೇಶ ಜೇರಟಗಿ
ಅ.ಸಾ.2 ಃ ಅಂಬರೀಶ ವಾರದ
ಅ.ಸಾ.3 ಃ ಶಾಮರಾಯ ಬಿರಾದಾರ
ಅ.ಸಾ.4 ಃ ಶಿವಕುಮಾರ ಸಿಂದಗಿ
ಅ.ಸಾ.5 ಃ ಮಲ್ಲಿಕಾರ್ಜುನ ಹುಬ್ಬಳ್ಳಿ
ಅ.ಸಾ.6 ಃ ರಮೇಶ ಹಡಪದ
ಅ.ಸಾ.7 ಃ ಹೂವಣ್ಣ ಬಗಲಿ

**ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ**

ನಿ.ಪಿ.1 ಃ ಜಪ್ತು ಪಂಚನಾಮೆ
ನಿ.ಪಿ.2 ಃ ಪೋಟೊ
ನಿ.ಪಿ.3 ಃ ಅ.ಸಾ.3 ರವರ ಹೇಳಿಕೆ
ನಿ.ಪಿ.4 ಃ ಅ.ಸಾ.3 ರವರ ಮರು ಹೇಳಿಕೆ
ನಿ.ಪಿ.5 ಃ ಅ.ಸಾ.4 ರವರ ಹೇಳಿಕೆ
ನಿ.ಪಿ.6 ಃ ಅ.ಸಾ.5 ರವರ ಹೇಳಿಕೆ
ನಿ.ಪಿ.7 ಮತ್ತು 8 ಃ ಜ್ಞಾಪನಾ ಪತ್ರಗಳು
ನಿ.ಪಿ.9 ಮತ್ತು 10 ಃ ವರದಿಗಳು

**ಅಭಿಯೋಜನೆಯ ಪರ ಗುರುತಿಸಲಾದ ಮು.ಮಾ**

ಇಲ್ಲ

**ಆರೋಪಿತರ ಪರ ಸಾಕ್ಷ್ಯ ಮಾಡಿಸಿದವರ ಪಟ್ಟಿ**

ಇಲ್ಲ

<u>ಆರೋಪಿತರ ಪರ ಗುರುತಿಸಲಾದ ದಾಖಲೆಗಳ ಪಟ್ಟಿ</u>

ಇಲ್ಲ

NAGESH KORGA MOGER
judgment
Digitally signed by NAGESH KORGA MOGER
Location: Sr.Civil Judge and JMFC Sindagi
Date: 2026.06.09 17:26:16 +0530

(ನಾಗೇಶ ಕೆ ಮೊಗೇರ)
ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ